ಆ) ಮಳೆಗಾಲ ಪ್ರಾರಂಭವಾದ ಕೂಡಲೇ ಗ್ರಾಮೀಣ ಪ್ರದೇಶದ ಬಸ್ಸುಗಳನ್ನು ರದ್ದು ಮಾಡುತ್ತಿರುವುದು.

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಅಧ್ಯಕ್ಷರೇ, ಬೇಸಿಗೆ ಮುಗಿದ ನಂತರ ಮಳೆಗಾಲ ಬಂದಿದೆ. ಆದರೆ ಕೆಎಸ್ಆರ್‌ಟಿಸಿಯವರು ಮಳೆಗಾಲ ಪ್ರಾರಂಭವಾದ ಕೂಡಲೇ ಯಾವ್ಯಾವ ಬಸ್‌ಗಳನ್ನು ರದ್ದು ಮಾಡಬೇಕೆಂದು ಒಂದು ಸಭೆ ಮಾಡಿ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚುಕಡಿಮೆ ಎಲ್ಲ ಸಾರಿಗೆಯನ್ನೂ ತೆಗೆದುಬಿಡುತ್ತಾರೆ. ಇದರಿಂದ ರೈತರಿಗೆ, ಜನರಿಗೆ ಬಹಳ ತೊಂದರೆ ಆಗುತ್ತಿದೆ. ಅವರಿಗೇನಾದರೂ ತೊಂದರೆ ಇದ್ದರೆ ಸಾರ್ವಜನಿಕ ಪ್ರತಿನಿಧಿಗಳೊಡನೆ ಚರ್ಚೆ ಮಾಡಬೇಕು. ನಮ್ಮಲ್ಲಿನ್ನೂ ಮಳೇನೆ ಇಲ್ಲ, ಬಿತ್ತನೆ ಶುರುವಾಗಿಲ್ಲ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ನಿಜ, ಸಾರ್ವಜನಿಕ ಪ್ರತಿನಿಧಿಗಳೊಡನೆ ಚರ್ಚಿಸಬೇಕು. ಸಾರಿಗೆ ಸಚಿವರು ಬಂದ ಮೇಲೆ ತಮ್ಮ ಜೊತೆ ಚರ್ಚಿಸಲು ಕೋರಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

(ಇ) ಆಲೂರು ಸಿದ್ದಾಪುರಕ್ಕೆ ಏತ ನೀರಾವರಿ ಯೋಜನೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಅಧ್ಯಕ್ಷರೇ ನೀರಾವರಿ ಸಚಿವರಿಲ್ಲ.

ಅಧ್ಯಕ್ಷರು: ಪರವಾಗಿಲ್ಲ, ನಾಣಯ್ಯ ಇದ್ದಾರೆ. ಆಡು ಮುಟ್ಟದ ಸೊಪ್ಪಿಲ್ಲ ನಾಣಯ್ಯನವರಿಗೆ ಗೊತ್ತಿರದ ವಿಷಯವಿಲ್ಲ. ಈ ಕೀರ್ತಿ ರಾಹುಲ್ ಸಾಂಕೃತ್ಯಾಯನರಿಗೆ ಇತ್ತು, ಅದಾದಮೇಲೆ ಎರಡನೆಯವರು ಅಂದರೆ ನಾಣಯ್ಯನವರೇ.

ಶ್ರೀ ಎಂ.ಪಿ ಅಪ್ಪಚ್ಚುರಂಜನ್ (ಸೋಮವಾರ ಪೇಟೆ): ಅಧ್ಯಕ್ಷರೇ, ನಮ್ಮ ಆಲೂರು ಸಿದ್ದಾಪುರದ ಏರಿಯಾದಲ್ಲಿ ಸುಮಾರು 10 ಸಾವಿರ ಎಕರೆ ಜಾಗ ಇದೆ, ಕೊಡಗಿನಲ್ಲಿ ಎರಡು ಅಣೆಕಟ್ಟೆ ಕಟ್ಟಿ ಕೊಡಗಿನ ಸ್ವಲ್ಪ ಜಾಗವೂ ಮುಳಗಡೆಯಾಗಿತ್ತು. ಆಲೂರು ಸಿದ್ದಾಪುರಕ್ಕೆ ಒಂದು ಏತ ನೀರಾವರಿಯನ್ನು ಹಾರಂಗಿಯಿಂದ ಕೊಡಿ ಅಂದರೆ ಅದರ ಪ್ರಸ್ತಾವನೆ ಇನ್ನೂ ಆಗಿಲ್ಲ. ಎರಡು ಮೂರು ಸಲ ವಿಧಾನಸಭೆಯಲ್ಲೂ ಮಂಡಿಸಿದೆ. ಪರಿಶೀಲನೆ ಮಾಡಲಾಗುವುದು ಅಂತಲೇ ಉತ್ತರ ಬರುತ್ತದೆ. ನಿನ್ನೆ ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದೇನೆ. ನೀರಾವರಿ ಸಚಿವರಿಗೂ ಹೇಳಿದೆ, ಆಗ ಅವರು ಶೂನ್ಯವೇಳೆಯಲ್ಲಿ ಎತ್ತಿ ಅದಕ್ಕೆ ತಕ್ಕ ಉತ್ತರ ನಾನು ಕೊಡುತ್ತೇನೆ ಅಂದರು. ಏನೂ ಉತ್ತರ ಬರಲಿಲ್ಲ. 50 ಕ್ಯುಸೆಕ್ಸ್ ನೀರು ಬಂದರೆ ಸುಮಾರು 10 ಸಾವಿರ ಎಕರೆಗೆ ನೀರಾಗುತ್ತದೆ. ಮತ್ತು ಇದು ಹಾಸನದ ಬಾರ್ಡರ್ ಇರುವ ಸ್ಥಳ ಆದ್ದರಿಂದ ದಯವಿಟ್ಟು ಈ ಸರ್ಕಾರದ ಪತಿಯಿಂದ ಮಾಡಿಕೊಡಬೇಕೆಂದು ಒತ್ತಾಯ

ಹಾಕುತ್ತಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅವರು ನನ್ನ ಜೊತೆ ಕೂಡ ಚರ್ಚೆ ಮಾಡಿದ್ದಾರೆ. ನಾನು ಇಲಾಖೆಯ ಇಂಜಿನಿಯರ್‌ಗಳ ಜೊತೆ ಚರ್ಚಿಸಿದ್ದೇನೆ. ಒಂದು ವರದಿ ಪ್ರಕಾರ ಅದು ಟೆಕ್ನಿಕಲಿ ನಾಟ್ ಫೀಜಿಬಲ್, ಎಕನಾಮಿಕಲಿ ಅದು ವಯಬಲಲ್ಲ ಅಂತಲೂ ಹೇಳುತ್ತಾರೆ. ಪುನಃ ಇದನ್ನು ನಾನು ನೀರಾವರಿ ಸಚಿವರ ಜೊತೆ ಚರ್ಚೆ ಮಾಡಿ ಅಲ್ಲಿನ ಜಮೀನಿಗೆ ನೀರು ಕೊಡಿಸಬೇಕೆಂಬುದು ನಮಗೆ ನಿಮಗೆ ಗೊತ್ತಿದೆ. ಅದು ಎಕಾನಮಿಕಲಿ ವಯಬಲಲ್ಲದಿದ್ದರೂ ಏನಾದರೂ ಮಾಡಿ ಒಂದು ಕಾರ್ಯಕ್ರಮ ಹಾಕೋಣ, ಅವರ ಜೊತೆ ಒಂದು ಸಭೆಯನ್ನು ಏರ್ಪಾಡು ಮಾಡುತ್ತೇನೆ, ಆಗ ನೀವೂ ಬನ್ನಿ.

(ಈ) ಹುಣಸೂರು ತಾಲ್ಲೂಕು ಕೊಳೆಗಟ್ಟೆ ಗ್ರಾಮದ ಬಳಿ ರಸ್ತೆ ಅಪಘಾತ ಕುರಿತು.

ಶ್ರೀ ಹೆಚ್.ಡಿ.ಬಸವರಾಜ್ (ವಿರಾಜಪೇಟೆ): ಅಧ್ಯಕ್ಷರೇ 26-4-99ರಂದು ಹುಣಸೂರು ತಾಲ್ಲೂಕು ಕೊಳಗಟ್ಟೆ ಗ್ರಾಮದ ಬಳಿ ಒಂದು ರಸ್ತೆ ಅಪಘಾತ ಆಯಿತು. ಆ ಅಪಘಾತದಲ್ಲಿ ಒಂದು ಕಾರಿಗೆ ಒಂದು ಮಗು ಸಿಕ್ಕಿ ಮರಣ ಹೊಂದಿತು. ಆ ಸಂದರ್ಭದಲ್ಲಿ ವಿರಾಜಪೇಟೆಯ ವಕೀಲ ಶ್ರೀ ಎಂಎಂ ಐಯಪ್ಪ ಅಲ್ಲಿಗೆ ಬಂದು ಪರಿಸ್ಥಿತಿಯ ಉದ್ವಿಗ್ನತೆ ತಿಳಿದುಕೊಂಡು ಅದನ್ನು ಸಮಾಧಾನ ಮಾಡಲಿಕ್ಕೆ ಪ್ರಯತ್ನಿಸುತ್ತಾರೆ. ಅಲ್ಲಿ ನೆರೆದಿದ್ದ ಜನ ಆ ಕಾರ್‌ನಲ್ಲಿದ್ದ ಪ್ರಯಾಣಿಕರ ಮೇಲೆ ಹಲ್ಲೆ ಮಾಡಬೇಕೆಂಬ ಅಭಿಪ್ರಾಯ ಗುಂಪಿನಲ್ಲಿ ಬರುತ್ತದೆ. ಆಗ ಐಯಪ್ಪನವರು ಸಮಾಧಾನ ಹೇಳಿ ಯಾವುದೇ ಕಾರಣಕ್ಕೂ ಕಾನೂನನ್ನು ಕೈಗೆ ಎತ್ತಿಕೊಳ್ಳಬೇಡಿ, ಪೋಲಿಸರಿಗೆ ಇದನ್ನು ವಹಿಸೋಣ, ಹುಣಸೂರಿನಿಂದ ಅವರು ಬರುವವರೆಗೂ ಸಮಾಧಾನವಾಗಿರಿ ಎಂದು ಹೇಳುತ್ತಿದ್ದರು. ಸುಮಾರು ಎರಡು ಗಂಟೆ ತರುವಾಯ ಅಲ್ಲಿಗೆ ಹುಣಸೂರಿನ ಪೋಲಿಸ್ ಅಧಿಕಾರಿ ರಾಜೀವ್ ಎಂಬುವವರು ಬರುತ್ತಾರೆ. ಬಂದು ಸಮಾಧಾನ ಮಾಡುತ್ತಿದ್ದ ಐಯಪ್ಪನವರ ಮೇಲೆ ಏಕಾಏಕಿ ಹಲ್ಲೆ ಮಾಡುತ್ತಾರೆ. ಅವಾಚ್ಯ ಶಬ್ದ ನಿಂದನೆ ಮಾಡುತ್ತಾರೆ. ಇದರಿಂದ ಐಯಪ್ಪನವರಿಗೆ ಆಘಾತ ಉಂಟಾಗುತ್ತದೆ. ಆದರೂ ಸಾವರಿಸಿಕೊಂಡು ನಾನು ಈ ಸಂದರ್ಭದಲ್ಲಿ ಏನು ಒಳ್ಳೆಯ ಕೆಲಸ ಮಾಡಬೇಕಾಗಿತ್ತೋ ಅದನ್ನು ನಾನು ಮಾಡುತ್ತಿದ್ದೇನೆ ಏಕಾಏಕಿ ನನ್ನ ಮೇಲೆ ಪ್ರಹಾರ ಮಾಡುವುದು ಸರಿಯಲ್ಲ ಎಂದು ಹೇಳಿದರೂ ಆ ಅಧಿಕಾರಿ ಹಲ್ಲೆ ಮುಂದುವರೆಸುತ್ತಾರೆ. ಇದನ್ನು ಪ್ರತಿಭಟಿಸಿ ವೀರಾಜಪೇಟೆಯ ಬಾರ್ ಅಸೋಸಿಯೇಷನ್‌ನವರು ಪ್ರತಿಭಟನೆ ಮಾಡುತ್ತಾರೆ, ಆ ಪೋಲಿಸ್ ಅಧಿಕಾರಿ ವಿರುದ್ಧ ಕ್ರಮತೆಗೆದುಕೊಳ್ಳಬೇಕೆಂದು ಆಗ್ರಹಿಸುತ್ತಾರೆ. ಐಯಪ್ಪನವರೂ ಹಲವಾರು ಅಹವಾಲುಗಳ ಮೂಲಕ ಆ ಅಧಿಕಾರಿ ವಿರುದ್ಧ ಯಾವ ಕ್ರಮವನ್ನೂ ಸರ್ಕಾರ